# ಮುಖ್ಯ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಯಾದಗಿರಿ.

## ಸಿ.ಸಿ. ನಂ.57/ 2019

ಸಿಡಬ್ಲ್ಯೂ ಃ **15**
ಪಿಡಬ್ಲ್ಯೂ ಃ **3**

ದಿನಾಂಕಃ **26-09-2024**

ಸಾಕ್ಷಿಗೆ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು

| | | |
|---|---|---|
| ಸಾಕ್ಷಿಯ ಹೆಸರು | - | ಭೀಮರಾಯ |
| ತಂದೆಯ/ಗಂಡನ ಹೆಸರು | - | ಸುಭಾಷ |
| ವಯಸ್ಸು | -? | **29** ವರ್ಷ |
| ಉದ್ಯೋಗ | - | ಒಕ್ಕಲುತನ |
| ವಾಸಸ್ಥಳಃ | - | ಮುಂಡರಗಿ. |

ಮುಖ್ಯ ವಿಚಾರಣೆಃ ಹಿ.ಸ.ಸ.ಅಭಿಯೋಜಕರಿಂದಃ

ಸಾಕ್ಷಿಯು ಅಪಘಾತ ಸ್ಥಳದ ಪಂಚನಾಮೆ ಮೇಲೆ ಇರುವ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ ಆದ್ದರಿಂದ ಪಂಚನಾಮೆಯನ್ನು ನಿಪಿ 6 ಎಂದು ಗುರುತಿಸಲಾಯಿತು. ಅದರ ಮೇಲೆ ಇರುವ ಸಾಕ್ಷಿಯ ಸಹಿಯನ್ನು ನಿಪಿ6(ಎ) ಎಂದು ಗುರುತಿಸಲಾಯಿತು. ಕಳೆದ 5-6 ವರ್ಷಗಳ ಹಿಂದೆ ನಾನು ಮುಂಡರಗಿ ಗೇಟ್ ಹತ್ತಿರ ಸಹಿ ಮಾಡಿರುತ್ತೇನೆ. ಪೊಲೀಸರು ಸಹಿ ಮಾಡು ಎಂದು ಹೇಳಿದ ಕಾರಣ ನಾನು ಸಹಿ ಮಾಡಿರುತ್ತೇನೆ. ನಿಪಿ6 ರಲ್ಲಿ ಬರೆದಿರುವ ವಿಷಯ ನನಗೆ ಗೊತ್ತಿರುವುದಿಲ್ಲ. ನನ್ನ ಎದುರುಗಡೆ ಯಾವುದೇ ವಾಹನವನ್ನು ಜಪ್ತಿಪಡಿಸಿಕೊಂಡಿರುವುದಿಲ್ಲ. ಸಾಕ್ಷಿಯು ಭಾವಚಿತ್ರಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ 7 ರಿಂದ 10 ಎಂದು ಗುರುತಿಸಲಾಯಿತು. ನಿಪಿ 7 ರಿಂದ 10 ಯಾವ ವಿಚಾರದ ಸಲುವಾಗಿ ತೆಗೆದಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ.

( ಈ ಹಂತದಲ್ಲಿ ಸಾಕ್ಷಿಯು ಪ್ರತಿಕೂಲಕರ ಸಾಕ್ಷ್ಯವನ್ನು ನುಡಿದ ಕಾರಣ ಹಿರಿಯ ಸ.ಸ.ಅಭಿಯೋಜಕರವರು ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ. )

ಪಾಟೀ ಸವಾಲುಃ  ಹಿರಿಯ ಸ.ಸ, ಅಭಿಯೋಜಕರವರಿಂದಃ

ದಿನಾಂಕಃ 01.06.2018 ರಂದು ಯಾದಗಿರಿ - ಹೈದ್ರಬಾದ್ ಮುಖ್ಯ ರಸ್ತೆಯ ಮೇಲೆ ಮುಂಡರಗಿ ಗ್ರಾಮದಲ್ಲಿ ಗ್ರಾಮಪಂಚಾಯಿತಿ ಕಾರ್ಯಾಲಯದ ಎದುರುಗಡೆ ರಸ್ತೆಯ ಮೇಲೆ ನನ್ನನ್ನು ಹಾಗೂ ಚಾಸಾ-16 ರವರನ್ನು ಪೊಲೀಸರು ಕರೆಯಿಸಿದ್ದರು ಎಂದರೆ ಸರಿ. ಅಲ್ಲಿ ಭೀಮರಾಯ ತಂದೆ ಬಸವರಾಜ ಎನ್ನುವವರು ಅಪಘಾತ ಸ್ಥಳವನ್ನು ತೋರಿಸಿರುತ್ತಾರೆ ಎಂದರೆ ಸರಿ. ಬೆಳಗ್ಗೆ 10-30 ರಿಂದ 11-30 ಗಂಟೆಯ ವರೆಗೆ ನನ್ನ ಹಾಗೂ ಚಾಸಾ-16 ರವರ ಸಮಕ್ಷಮ ಅಪಘಾತಕ್ಕೆ ಸಂಬಂಧಿದಂತೆ ಪಂಚನಾಮೆಯನ್ನು ಮಾಡಿ ಕಮಾಂಡ್ ಜೀಪು ಸಂಖ್ಯೆ ಕೆಎ-36-ಎಮ್ - 1306 ಮತ್ತು ಬೂದಿ ಟ್ಯಾಂಕರ್ ಲಾರಿ ನಂಃ ಕೆಎ-22-ಬಿ - 7049 ನೇದ್ದವುಗಳನ್ನು ಜಪ್ತಿಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಅದರ ವಿಚಾರಗೊಸ್ಕರ ನಿಪಿ 7 ರಿಂದ 10 ನ್ನು ತೆಗೆದಿರುತ್ತಾರೆ ಎಂದರೆ ಸರಿಯಲ್ಲ. ಅಪಘಾತ ಸ್ಥಳದ ಪಂಚನಾಮೆಯನ್ನು ಮಾಡಿ ಪೋಟೋಗಳನ್ನು ತೆಗೆದಿರುವ ವಿಷಯ ನನಗೆ ಗೊತ್ತಿದ್ದರು ಸಹ ಆರೋಪಿತನಿಗೆ ಸಹಾಯ ಮಾಡಲು ಅಪಘಾತ ಸ್ಥಳದ ಪಂಚನಾಮೆಯನ್ನು ಮಾಡಿರುವುದಿಲ್ಲ ಮತ್ತು ಪೋಟೋಗಳನ್ನು ತೆಗೆದಿರುವುದಿಲ್ಲ ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಪಾಟೀ ಸವಾಲುಃ  ಆರೋಪಿ ಪರ ವಕೀಲರಾದ ಶ್ರೀ.ಜಿ.ಬಿ.ಆರ್ ರವರಿಂದಃ

ನಿಪಿ6 ರಲ್ಲಿ ಬರೆದಿರುವ ವಿಷಯ ನನಗೆ ಗೊತ್ತಿರುವುದಿಲ್ಲ. ಸಹಿ ಮಾಡು ಎಂದು ಹೇಳಿದ ಕಾರಣ ನಾನು ನಿಪಿ 6 ರ ಮೇಲೆ ಸಹಿ ಮಾಡಿರುತ್ತೇನೆ.

ಮರು ವಿಚಾರಣೆಃ ಇಲ್ಲ

( ತೆರೆದ ನ್ಯಾಯಾಲಯದಲ್ಲಿ  ನನ್ನ ಉಕ್ತ ಲೇಖನದಂತೆ ಬೆರಳಚ್ಚುಗಾರನಿಂದ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಅದೆ.

ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು,
ಯಾದಗಿರಿ.